ಕೆಲಸಕ್ಕೇಕೆ ಕೈ ಹಾಕುವುದು. ಆರಿಸಿದ ಮಾತ್ರಕ್ಕೆ ಕೊಳೆಯುವುದನ್ನೇನೂ ತಡೆಯಲಾಗದು. ನಷ್ಟಕ್ಕೆ ಸಿದ್ಧವಾಗಿರುವುದಾಗಿದೆ. ಕೊಳೆಯುವುದೆಲ್ಲ ಕೊಳೆತು ಹಾಳಾಗಲಿ ಅಂದುಕೊಂಡು ಮನೆದಾರಿಯತ್ತ ಮುಖ ತಿರುವಿದ. ಆದರೆ ಹೆಜ್ಜೆ ಹಾಕಲಿಲ್ಲ. ಕತ್ತಲ ದಾರಿಯಲ್ಲಿ ಕುರುಡು ಕುದುರೆ ಸವಾರಿ ತನ್ನ ಬದುಕು ಅಂದುಕೊಂಡ. ನಿಂತಲ್ಲೇ ಬಹಳ ಹೊತ್ತು ನಿಂತ. ಈ ಕತ್ತಲೆಯಲ್ಲಿ ಸೂರ್ಯೋದಯವಾದೀತೆ? ಆದರೆ ಎಂದು? ಉತ್ತರ ಸಿಗಲಿಲ್ಲ.

ಯಾರಲ್ಲಿಯಾದರೂ ಸಾಲ ಹುಟ್ಟೀತೆ ಎಂದುಕೊಂಡು ಊರಿನತ್ತ ಹೆಜ್ಜೆ ಹಾಕಿದ. ಯಾರಲ್ಲಿ ಕೇಳುವುದು? ಕೊಡಬಲ್ಲವರನ್ನು ನೆನಪಿಸಿಕೊಳ್ಳುತ್ತ ನಡೆದ. ಕೊಡುವಂತಹ ಎಲ್ಲರಲ್ಲಿಯೂ ಸಾಲವಿತ್ತು. ಪ್ರಯತ್ನಿಸಿದರೆ ಸಿಕ್ಕರೂ ಸಿಕ್ಕೀತೆಂಬ ಭರವಸೆ ಇಲ್ಲದ ಆಸೆಯಲ್ಲಿ, ಮೊದಲು ಯಾರನ್ನು ಕೇಳುವುದೆಂದು ಆಲೋಚಿಸುತ್ತ ನಡೆದ.

'ಸರಕಾದೋರು ನಮ್ಮೂರಿನ ಜಮೀನನ್ನು ತಗೋತಾರಂತೆ. ಬದಲಿಗೆ ದುಡ್ಡು ಕೊಡ್ತಾರಂತೆ. ಸುದ್ದಿ ನಿನ್ನವರೆಗೆ ಬಂದಿಲ್ಲೇನು? ಬಂದಿದ್ದರೂ ತಲೆ ತುಂಬ ಈರುಳ್ಳಿಯ ನಷ್ಟಾನೇ ತುಂಬಿಕೊಂಡಿದ್ದಿ. ಅದನ್ನು ಪಕ್ಕಕ್ಕಿಟ್ಟು ಇತ್ತ ಮನಸ್ಸು ಕೊಡು' ಎಂದು ಗಿರಿಯಪ್ಪ ಹೇಳಿದ್ದು ನೆನಪಾಯಿತು. ಒಳಗೇ ದಿಗಿಲಾಯಿತು.

'ಇಷ್ಟೊಂದು ಜಮೀನು ತಗೊಂಡು ಏನು ಮಾಡ್ತಾರಂತೆ?' ಅಂದಿದ್ದಕ್ಕೆ, 'ದೊಡ್ಡ ದೊಡ್ಡ ಫ್ಯಾಕ್ಟರಿ ಕಟ್ತಾರಂತೆ' ಅಂದವನು, 'ನನಗಿರೊ ಎರಡೆಕರೇನ ಬಿಟ್ಟು ಅವರು ಕೊಡೋ ಕಾಸಿಂದ ಸಾಲಗಳನ್ನು ಕಳೆದರೆ ಉಳಿಯೋ ಗಂಟಿನಲ್ಲಿ ಎಷ್ಟು ದಿನ ಬದುಕೋಕಾದೀತು? ನಂಗಿದು ಸಾಧ್ಯವಿಲ್ಲದ್ದು' ಅಂದ ಗಿರಿಯಪ್ಪ, ಹೊರಲಾಗದ ಚಿಂತೆಯ ಭಾರದಲ್ಲಿ ನಮ್ಮನ್ನು ದೇವರೇ ಕಾಪಾಡಬೇಕೆಂದು ನಿರಾಸೆಯ ಭಾರವನ್ನು ಚಿಂತೆಗೆ ಹೊರೆಸಿದ್ದ.

ಜಮೀನು ಕೈ ತಪ್ಪುವುದಾಗಿ ಕೇಳಿದ್ದ ನಿಗಿನಿಗಿಸುವ ಕೆಂಡದಂತಹ ಮಾತುಗಳಿಗಿಂತ ಬಿಸಿಲು ತಂಪೆನಿಸಿತು. ಹಳ್ಳಿ ಹಳ್ಳಿಯ ಜಮೀನನ್ನು ಸರಕಾರ ಕಿತ್ತುಕೊಂಡರೆ ಬದುಕುಲು ಎಲ್ಲಿಗೆ ಹೋಗಬೇಕು? ಈ ಊರಿನ ಜಮೀನು ಹೋದರೆ ಇನ್ನೋದು ಊರಿಗೆ ಹೋಗಿ ಕೂಲಿಯಾದರೂ ಮಾಡಬಹುದು. ರೈತನಿಂದ ಬೇಸಾಯವನ್ನೇ ಕಿತ್ತುಕೊಂಡರೆ ಬದುಕು ಎಲ್ಲಿರುತ್ತೆ? ಉದ್ಯೋಗ ಕೊಡ್ತಾರಂತೆ ಅಂದಿದ್ದ ಗಿರಿಯಪ್ಪ.

ನಮಗೆ ಗೊತ್ತಿರೋದು ಉತ್ತು ಬಿತ್ತಿ ಬೆಳೆಯುವುದು. ಫ್ಯಾಕ್ಟರೀಲಿ ಇದೇ ಕೆಲಸ ಇರುತ್ತ? ಎಲ್ಲ ರೈತರಿಗೂ ಕೊಡುವಷ್ಟು ಉದ್ಯೋಗ ಅಲ್ಲಿರುತ್ತ? ರೈತರೆಲ್ಲ ಫ್ಯಾಕ್ಟರಿ ಕೆಲಸಗಾರರಾದರೆ ದೇಶದ ಜನರಿಗೆ ಅನ್ನ ಹೇಗೆ? ರೈತ ಎಲ್ಲವವನ್ನೂ ಕೊಂಡು ತಿಂದು ಬಾಳೋದುಂಟ? ದುಡ್ಡು ಕೊಡ್ತಾರಂತೆ. ಅದು ಕೈಲಿದ್ದರೆ ಏನೇನೋ ಆಸೆಗಳು ಹುಟ್ಟಿಕೊಂಡು ಖರ್ಚಾಗಿಬಿಡುತ್ತೆ. ಹೀಗಾದರೆ ಮುಂದಿನ ನಮ್ಮ ಮಕ್ಕಳ ಗತಿಯೇನು? ಅವರಿಗಾಗಿಯಾದರೂ ಜಮೀನು ಬಿಡಕೂಡದು ಅಂದುಕೊಂಡಾಗ, ಬಿಡುವ ಹಾಗೆ ಮಾಡುತ್ತಾರಂತೆ ಎಂದು ಗಿರಿಯಪ್ಪನೇ ಅಂದ ಮಾತು ನೆನಪಿಗೆ ಬಂದು, 'ತಾತನ ಕಾಲದಿಂದ ಬಂದ ನೆಲ, ಖಾತೆದಾರ ನಾನು, ಕಂದಾಯವನ್ನೂ ಕಟ್ಟುತ್ತಿದ್ದೇನೆ, ಜಮೀನನ್ನು ಬಿಡುವುದಿಲ್ಲ ಎಂದರೆ ಹೇಗೆ ಬಿಡಿಸುತ್ತಾರೆ?' ಎಂದು ಗಿರಿಯಪ್ಪನನ್ನು ಪ್ರಶ್ನಿಸಿದ್ದ. 'ಆದರೂ ಬಿಡಿಸುತ್ತಾರಂತೆ. ಆಸ್ತಿ, ಅದರ ಹಕ್ಕು ಸರಕಾರದ್ದಂತೆ. ರೈತ ಅನುಭೋಗದಾರ ಮಾತ್ರವಂತೆ. ಅದಕ್ಕೆ ದುಡ್ಡು ಕೊಡೋದಂತೆ' ಅಂದಿದ್ದ ಗಿರಿಯಪ್ಪ. ಇದು ಹೇಗೆಂದು ಮಾರಪ್ಪನಿಗೆ ಅರ್ಥವಾಗಲಿಲ್ಲ. ಆದರೆ ಜಮೀನು ಕಳೆದುಕೊಳ್ಳುವ ದಿನ ದೂರವಿಲ್ಲ ಅನ್ನಿಸಿತು. ಇದು ನಿಜವೇ ಆದರೆ ಬೆಳೆ ಇಡಲು ಸಾಲಕ್ಕೇಕೆ ಅಲೆದಾಡಬೇಕು ಅನ್ನಿಸಿತು. ಹಾಗೆಂದು ರೈತನಾಗಿ ನೆಲವನ್ನು ಬೀಡು ಬಿಡಲಾಗದಲ್ಲ. ಆ ದಿನದವರೆಗಾದರೂ ಬೇಸಾಯ ಮಾಡಲೇಬೇಕಲ್ಲ.

ಮಾರಪ್ಪ ಸಾಲ ಕೊಡುವವರ ಮನೆಯಿಂದ ಮನೆಗೆ ಅಲೆದ. ಹಿಂದಿನ ಸಾಲ ತೀರಿಸಲು ವಾಯಿದೆ ಕೇಳಿದ. ಕೊಡಲಾಗದೆಂದವರ ಬಳಿ ಗೋಗರೆದ. ಒಂದಿಬ್ಬರು ನೋಡೋಣವೆಂದು ಹೇಳಿದರಷ್ಟೆ, ಕೊಡುವ ಭರವಸೆ ಕೊಡಲಿಲ್ಲ. ನಿರಾಸೆಯಲ್ಲಿ ಕೊಳ್ಳುವವರಾರೋ ಅವರು ಬೇಗ ಬಂದು ಕೊಳ್ಳಲಿ. ಈ ಶನಿಕಾಟ ಸಾಕು ಅಂದಕೊಂಡ ಕೂಡಲೆ, ಎಲ್ಲಿ ಯಾವ ದೇವತೆ ತಥಾಸ್ತು ಅಂದುಬಿಡುವುದೋ ಎಂದು ಹೆದರಿ, ಬಿಡ್ತು, ಬಿಡ್ತು, ಬಿಡ್ತು ಅನ್ನುತ್ತ ಕೆನ್ನೆ ಬಡಿದುಕೊಂಡು ಮನೆಯ ದಾರಿ ಹಿಡಿದ.

ದಾರಿಯಲ್ಲಿ ಎದುರಾದ ಬೈಚಪ್ಪ, 'ಜಮೀನು ಕೊಡುವುದಿಲ್ಲ ಅನ್ನುವವರು ಮುಂದಿನ ಸೋಮಾರದಿಂದ ಹೋರಾಟ ಶುರುಮಾಡೋದು ಅಂತಿದ್ದಾರೆ. ನಿನ್ನ ಸಂಗತಿ ಏನು' ಎಂದು ಕೇಳಿದ. ಜಮೀನು ಉಳಿಯೋದೇ ಆದರೆ ನಾನೂ ರೆಡಿ ಅಂದ.

ಮನೆಗೆ ಬಂದ ಕೂಡಲೇ ಹೆಂಡತಿಗೆ ಕುಡಿಯುವ ನೀರು ತರಲು ಕೂಗಿ ಹೇಳಿದ. ಅವಳು ತಂದುಕೊಟ್ಟ ತಂಬಿಗೆ ನೀರನ್ನು ಗಟಗಟ ಕುಡಿದ ಮಾರಪ್ಪ, ಅದನ್ನು ಹೆಂಡತಿಯ ಕೈಗೆ ಕೊಟ್ಟು, 'ಇದು ಬಿಸಿಲೋ ಬೆಂಕೀನೊ' ಅಂದ.

'ಬಿಸಿಲೇ, ಬೆಂಕಿ ಆಗಿದ್ರೆ ಸುಟ್ಟು ಹೆಣವಾಗ್ತಿದ್ದಿ. ಬೀದಿನಾಯಿ ಹಾಗೆ ಬಿಸಿಲಲ್ಲಿ ಅಲೆಯೊ ಬದಲು ಮನೇಲಿ ಬಿದ್ದಿರಬೋದಲ್ಲ' ಎಂದು ಸಿಡಿಮಿಡಿಗೊಂಡಳು ರಾಮುಲಮ್ಮ. 'ನಿನಗೇನು ರಾಣಿ, ಮನೇಲಿರುತಿ. ನಾನಿರೋಕಾಗುತ್ತ?' ಸಿಡುಕಿದ. 'ಹೌದೌದು, ರಾಣಿ ಆಗಿದ್ದಕ್ಕೇ ಹಬ್ಬಾಂದ್ರು ಒಂದು ನೂಲುಸೀರೆಗೂ ಗತಿಯಿಲ್ದೆ ಇರೋದು.' ಅಷ್ಟೇ ಬಿರುಸಿನಿಂದ ತಾನೂ ಸಿಡುಕಿದಳು. 'ಅದಕ್ಕೇ ಮಾರಾಯ್ತಿ, ಸಾಲಾನಾದರು ಹುಟ್ಟುತ್ತ ಅಂತ ಅಲೆದದ್ದು. ಬೆಳಗೆದ್ದು ನಿನ್ನ ಸುಟ್ಟಮೂತಿ ನೋಡಿದ್ದು ನೋಡು, ಸಾಲಾನೂ ಹುಟ್ಟಲಿಲ್ಲ' ಅಂದು ಅಸಹಾಯಕ ಸಿಟ್ಟನ್ನು ಕಕ್ಕಿದ. 'ಈರುಳ್ಳಿ ಹಾಕಬೇಡ, ಆಲೂಗೆಡ್ಡೆ ಹಾಕು ಅಂತ ಬಡಕೊಂಡೆ. ಕೇಳಿಸಿಕೊಂಡ ಗಂಡೇ ನೀನು? ಆಗ ಏನಂದಿ, ಸೆರಗಲ್ಲಿ ಗೊಣ್ಣೆ ಸೀಟಿಕೊಳ್ಳೊ ಹೆಂಗಸಿಗೆ ಬೇಸಾಯ ಏನು ಗೊತ್ತು ಅಂತಲ್ವ. ನಿಂಗೆ ಗೊತ್ತಿದ್ದೂ ಆದ ಉದ್ಧಾರಕ ಏನಂತ ನೀನೇ ಕಂಡ್ಯಲ್ಲ? ಹುಣಿಸೆಮರದಡಿ ರಾಶಿ ಅಲ್ಲೇ ಕೊಳೆತು ಹೋಗ್ತಿದೆ' ಎಂದು ಅವನ ಮೂತಿ ಹೆಟ್ಟಿದಳು.

ಮಾತು ವಾದವನ್ನು ದಾಟಿ ಜಗಳಕ್ಕೆ ತಿರುಗಿತು. ರಾಮುಲಮ್ಮ ಕಣ್ಣೀರನ್ನು, ಮೂಗಿನಿಂದ ಸುರಿದು ಬರುತ್ತಿದ್ದುದನ್ನು ಸೆರಗಿನಿಂದ ಒರೆಸಿಕೊಳ್ಳುತ್ತ, ತಟ್ಟೆಯಲ್ಲಿ ಮುದ್ದೆ ತಂದು ಅವನ ಮುಂದೆ ಕುಕ್ಕಿದಳು. ಅದು ಪುಟಿದು ನೆಲದ ಮೇಲೆ ಉರುಳಿತು. 'ಅಯ್ಯೋ ಮತಿಗೆಟ್ಟ ಮುಂಡೆ ನಾನು' ಅನ್ನುತ್ತ ಬೇರೊಂದು ಮುದ್ದೆ ತರಲು ಅಡುಗೆಮನೆಗೆ ಹೋದಳು. ಹಿಂದಿರುಗುವಷ್ಟರಲ್ಲಿ ಅವನು ಮನೆಯಿಂದ ಹೊರಕ್ಕೆ ನಡೆದಿದ್ದ.

ಹೆಂಡತಿಗೆ ಜಮೀನು ಕಳೆದುಕೊಳ್ಳಲಿರುವ ವಿಷಯ ಹೇಳಬೇಕು. ಈ ವಿಚಾರದಲ್ಲಿ ಅವಳ ಅಭಿಪ್ರಾಯ ತಿಳಿಯಬೇಕು. ತಾನು ಸತ್ಯಾಗ್ರಹಕ್ಕೆ ಕುಳಿತರೆ ಮನೆ ವ್ಯವಹಾರ ನೋಡಿಕೊಳ್ಳಬೇಕಾಗುವುದೆಂದು ಹೇಳಬೇಕು ಅಂದುಕೊಂಡಿದ್ದ. ಆದರೆ ಅವಳು ಅವಕಾಶ ಕೊಡದೆ ಜಗಳ ತೆಗೆದು, ಮನಸ್ಸಿಗೆ ಬೇಸರ ಉಂಟುಮಾಡಿದ್ದಳು. ಸಾಲದ್ದಕ್ಕೆ 'ಒಂದು ನೂಲುಸೀರೆಗೂ ಗತಿಯಿಲ್ಲ' ಎಂದು ಅವಮಾನಿಸಿದ್ದಳು. ತಂದು ಅವಳ ಮುಂದೆ ಎಸೆಯಬೇಕು ಎಂದುಕೊಂಡವನು ಸೀದಾ ತೋಟದ ಹುಣಿಸೆಮರದಡಿಗೆ ಹೋದ. ಈರುಳ್ಳಿ ರಾಶಿಯ ಮುಂದೆ ಕುಳಿತು, ಕೊಳೆತವನ್ನು ಆರಿಸಿ ಒಂದು ಕಡೆ, ಮೊಳಕೆ ಇಟ್ಟವನ್ನು ಇನ್ನೊಂದು ಕಡೆ ಹಾಕಿದ. ನೋಡಿದರೆ ಕೊಳೆತ ಈರುಳ್ಳಿಯ ರಾಶಿಯೇ ದೊಡ್ಡದಾಗಿತ್ತು. ಮೊಳಕೆ ಇಟ್ಟವು ಅದರ ಅರ್ಧದಷ್ಟಿತ್ತು. ಚೆನ್ನಾಗಿದ್ದವನ್ನು ಗೋಣಿಚೀಲಕ್ಕೆ ಹಾಕಿದ. ಅದು ತುಂಬಿಕೊಂಡಿತು. ದಾರಿಯಲ್ಲಿ ಹೋಗುತ್ತಿದ್ದವನಿಂದ ನೆತ್ತಿಗೆತ್ತಿಸಿಕೊಂಡು ಪೇಟೆಯತ್ತ ನಡೆದ.

ಮಂಡಿಯಲ್ಲಿ ತೂಕ ಹಾಕಿಸಿದಾಗ ನಲವತ್ತು ಕೇಜಿ ತೂಗಿತು. ಚೀಲದ ತೂಕ ಅರ್ಧ ಕೇಜಿ ಎಂದ ರೈಟರ್, ಕೇಜಿಗೆ ಮೂರು ರುಪಾಯ್. 118.50. ಕಮೀಷನ್ ಜಾತಾ 118.50 ಎಂದು ಕೂಗಿದ. ಮಾರಪ್ಪ ಮಂಡಿ ಮಾಲೀಕನ ಬಳಿ 'ಒಂದು ನೂರೈವತ್ತಾದರೂ ಕೊಡು ಸಾವ್ಕಾರ' ಎಂದು ಅಂಗಲಾಚಿದ. ತನಗೆ ಮಾತೇ ಬರದೇನೊ ಅನ್ನುವಂತೆ ಕುಳಿತಿದ್ದ ಅವನು ರೈಟರ್ ಹೇಳಿದಷ್ಟನ್ನು ಮಾರಪ್ಪನ ಕೈಗಿತ್ತ.

ಅಲ್ಲಿ ಮೂಲೆಯಲ್ಲಿ ಸುಮಾರಾಗಿ ಮೊಳಕೆಯೊಡೆದಿದ್ದ ಈರುಳ್ಳಿಗುಡ್ಡೆಯನ್ನು ನೋಡಿ, 'ಕೇಜಿಗೆಷ್ಟು?' ಅಂದ. ರೈಟರ್ 'ಒಂದು ರುಪಾಯ್' ಅಂದ. ಮಾರಪ್ಪ ಖಾಲಿ ಚೀಲದೊಂದಿಗೆ ಓಡಿದ. ಸಣ್ಣದಾಗಿ ಮೊಳಕೆ ಇಟ್ಟವನ್ನು ಆರಿಸಿ, ಮೂಟೆಗೆ ತುಂಬಿಕೊಂಡು ಮಂಡಿಗೆ ಹೋದ. ತಕ್ಕಡಿ ಮುವ್ವತ್ತು ಕೇಜಿ ಎಂದು ತೋರಿಸಿತು. 'ನಲವತ್ತಾದರೂ ಕೊಟ್ಟು ಪುಣ್ಯಕಟ್ಟಿಕೊ ಸಾವ್ಕಾರ' ಎಂದು ಮಂಡಿ ಮಾಲೀಕನಲ್ಲಿ ಗೋಗರೆದ. ಅವನು ತಿರುಪೆಯವನನ್ನು ನೋಡುವಂತೆ ನೋಡಿ, ಮೂವವತ್ತೈದು ರೂಪಾಯಿಗಳನ್ನು ಮಾರಪ್ಪನು ಒಡ್ಡಿದ ಬೊಗಸೆಗೆಸೆದ.